**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ**

**ನ್ಯಾಯಿಕ ದಂಡಧಿಕಾರಿಗಳ ನ್ಯಾಯಾಲಯ, ಕುಷ್ಟಗಿ**

**ಸಿ ಸಿ ಸಂಖ್ಯೆಃ 1458/2022 ಸಿಡಬ್ಲ್ಯೂ ಃ 18**

**ಪಿಡಬ್ಲ್ಯೂ ಃ 4**

**ಸಾಕ್ಷಿದಾರರ ಹೆಸರು ಃ ಮೌನೇಶ**

**ತಂದೆಯ ಹೆಸರು ಃ ಉಮಲಪ್ಪ ರಾಠೋಡ**

**ವಯಸ್ಸು ಃ 30 ವರ್ಷ**

**ಉದ್ಯೋಗ ಃ ಪಿ ಎಸ್ ಐ**

**ವಾಸ ಃ ಮರಿಯಮ್ಮನಹಳ್ಳಿ**

**ದಿನಾಂಕಃ 27.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

1. ನಾನು ದಿನಾಂಕಃ 29.07.2022 ರಿಂದ ದಿನಾಂಕಃ 29.07.2023 ರವರೆಗೆ ಕುಷ್ಟಗಿ ಪೊಲೀಸ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 13.08.2022 ರಂದು ಬೆಳಿಗ್ಗೆ 09.00 ಗಂಟೆಗೆ ಚಾಸಾ 1 ರವರು ಠಾಣೆಗೆ ಹಾಜರಾಗಿ ಸಲ್ಲಿಸಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ನಂ. 159/2022 ರಲ್ಲಿ ಕಲಂ 279, 304(ಎ) ಐಪಿಸಿ ಯಡಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿಯು ಮದ್ಯಪಾನ ಮಾಡಿದ್ದಾನೋ ಅಥವಾ ಇಲ್ಲವೊ ಕುರಿತು ವರದಿ ನೀಡಲು ಕುಷ್ಟಗಿ ತಾಲೂಕಾ ವೈದ್ಯಾಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡಿರುತ್ತೇನೆ. ಪ್ರಕರಣವು ಘೋರ ಗುನ್ಹೆ ಆದುದರಿಂದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 19 ರವರಿಗೆ ನೀಡಿರುತ್ತೇನೆ.

3. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಿದ್ದು, ಸಹಿಯನ್ನು ನಿಪಿ 1 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 10 ಎಂದು, ಸಹಿಯನ್ನು ನಿಪಿ 10 ಎ ಎಂದು

ಗುರುತಿಸಲಾಯಿತು. ಸಾಕ್ಷಿಯು ವೈದ್ಯಾಧಿಕಾರಿಗೆ ನೀಡಿದ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 11 ಎಂದು, ಸಹಿಯನ್ನು ನಿಪಿ 11 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಎ ಪಿ ವಕೀಲರಿಂದಃ**

4. ದೂರಿನ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ಅಪಘಾತದ ಸ್ಥಳ ಕುಷ್ಟಗಿ ಠಾಣೆಯಿಂದ ಅಂದಾಜು 3 ರಿಂದ 5 ಕಿ.ಮೀ. ದೂರ ಇರಬಹುದು. ದೂರು ನೀಡಲು ಆದ ವಿಳಂಬದ ಕುರಿತು ದೂರಿನಲ್ಲಿ ಚಾಸಾ 1 ಕಾರಣ ಬರೆದಿಲ್ಲ. ದೂರಿನಲ್ಲಿ ಚಾಸಾ 1 ಚಾಲಕ ಜೋರಾಗಿ ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿದ್ದರಿಂದ ಅಪಘಾತ ಆಗಿದೆ ಎಂದು ಬರೆದಿರುತ್ತಾರೆ. ಚಾಸಾ 1 ರವರು ದೂರನ್ನು ಬರೆದುಕೊಂಡು ಬಂದಿರುತ್ತಾರೆ. ಚಾಸಾ 1 ರವರು ನನಗೆ ಸುಳ್ಳು ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 1 ರವರು ಯಾವುದೇ ಹೇಳಿಕೆ ನೀಡದಿದ್ದರೂ ಸಹ ದೂರನ್ನು ತಯಾರಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಯ ಮದ್ಯಪಾನ ಮಾಡಿದ ಕುರಿತು ವೈದ್ಯಾಧಿಕಾರಿಗಳಿಗೆ ಯಾವುದೇ ಪತ್ರ ಬರೆದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**